ಪುಸ್ತಕ ಸಂಸ್ಕೃತಿ

# ಪುಸ್ತಕ ರಾಶಿ-ಕಾಶಿ



ಅಂಕೇಗೌಡರಿಗೆ ಪುಸ್ತಕದ ಕುರಿತು ಮಾತನಾಡುವುದೆಂದರೆ ಸಂತೃಪ್ತಿ

**ಇದು ‘ಪುಸ್ತಕ ಮನೆ’. ಹತ್ತು ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳ ಖಜಾನೆ. ಜ್ಞಾನ ಕಾಶಿ. ಸ್ವಂತ ಗಳಿಕೆಯ ಬಲದಿಂದ ಕಟ್ಟಿದ ಪುಸ್ತಕ ತಾಪಸಿಯೊಬ್ಬರ ಶ್ರಮದ ಫಲ. ರಾಜ್ಯ ಯಾಕೆ, ದೇಶದಲ್ಲೇ ಅಪರೂಪದ್ದು. ಪಾಂಡವಪುರದ ಅಂಕೇಗೌಡರ ‘ಪುಸ್ತಕ ಮನೆ’ ನಾಡಿನ ಸಾರಸ್ವತಲೋಕದ ಅಪೂರ್ವ ನಿಧಿ.**

■ ನಾ. ಕಾರಂತ ಪೆರಾಜೆ

ಮೈಸೂರು ಸನಿಹದ ಪಾಂಡವಪುರ ವಿಶ್ವೇಶನಗರದ ಹರಳಹಳ್ಳಿಯ ‘ಪುಸ್ತಕ ಮನೆ’ಯೊಳಗೆ ಕಾಲಿಟ್ಟಾಗ ದಂಗು! ಅಬ್ಬಾ... ಹತ್ತು ಲಕ್ಷಕ್ಕೂ ಮೀರಿದ ಪುಸ್ತಕಗಳು! ಕಪಾಟಿನೊಳಗೆ ಸೇರದ ರಾಶಿಯ ಮಧ್ಯದಿಂದ ಅಂಕೇಗೌಡರ ದನಿ ಕೇಳಿಸಿತು, ‘ಬನ್ನಿ, ಪುಸ್ತಕ ಲೋಕಕ್ಕೆ. ಸ್ವಾಗತ.’

ಎಂ. ಅಂಕೇಗೌಡರು ಓರ್ವ ಪುಸ್ತಕಾಸಕ್ತಿಯ ತಾಪಸಿ! ಪುಸ್ತಕ ಸಂಗ್ರಹವು ಅವರಿಗೆ ತಪಸ್ಸು. ಅದರ ಮುಂದೆ ವೈಯಕ್ತಿಕ ಬದುಕು ಗೌಣ. ಐಷಾರಾಮ ದೂರದ ಮಾತು. ‘ಜಗತ್ತಿನ ಎಲ್ಲಾ ಜ್ಞಾನಗಳು ಒಂದೇ ಸೂರಿನಡಿ’ ಇರಬೇಕೆನ್ನುವ ಹಪಹಪಿ. 40 ವರುಷಗಳಿಂದ ಪುಸ್ತಕದ್ದೇ ಧ್ಯಾನ.

ಗೌಡರು ಮೂಲತಃ ಕೃಷಿಕರು. ಬಾಲ್ಯದ ಬದುಕು ಹೂವಿನದ್ದಲ್ಲ. ಕಲಿಕೆಯ ಹಸಿವು ಅಪಾರ. ಪುಸ್ತಕ, ಗ್ರಂಥಾಲಯ ವಿರಳವಾಗಿದ್ದ ಕಾಲಘಟ್ಟ ಅಂದರೆ ಸುಮಾರು 1975ರಲ್ಲಿ ಮೈಸೂರಲ್ಲಿ ಕನ್ನಡ ಎಂ.ಎ. ಮಾಡಿದರು. ತೊಂಬತ್ತೆಂಟು ಮಂದಿಯಲ್ಲಿ ಇಬ್ಬರೇ ಪಾಸ್! ಆ ಇಬ್ಬರಲ್ಲಿ ಒಬ್ಬರು ಅಂಕೇಗೌಡರು!

‘ಒಳ್ಳೆಯ ಹವ್ಯಾಸಗಳು ಮೌಲ್ಯಯುತ ಬದುಕನ್ನು ರೂಪಿಸುತ್ತದೆ. ಪುಸ್ತಕಗಳು ಸ್ನೇಹಿತನಿದ್ದಂತೆ’ – ಗುರು ಕೆ.ಅನಂತರಾಮು ಅವರು ಹೇಳಿದ ಮಾತು ಗೌಡರ ಬದುಕಿಗೆ ತಿರುವು ತಂದಿತು. ಅಲ್ಲಿಂದ ಪುಸ್ತಕದ ಗೀಳು. ಗಳಿಸಿದ್ದರಲ್ಲಿ ಪುಸ್ತಕ ಖರೀದಿಗೆ ಸಿಂಹಪಾಲು. ಕನ್ನಾಡು, ಸುತ್ತಮುತ್ತಲಿನ ರಾಜ್ಯದೆಲ್ಲೆಡೆ ಕಾಲಿಗೆ ಚಕ್ರಕಟ್ಟಿ ಓಡಾಡಿದರು. ಪುಸ್ತಕ ಪ್ರೇಮಿಗಳ, ವ್ಯಾಪಾರಿಗಳ ಸಂಪರ್ಕ ಮಾಡಿಕೊಂಡರು. ಹೊಸ ಪುಸ್ತಕ ಯಾವುದು ಪತ್ತೆಯಾದರೂ ಗೊತ್ತಾಗುವಂತಹ ಸಂಪರ್ಕ ಸರಪಳಿ ಏರ್ಪಟ್ಟಿತು. ಹನಿ ಹನಿಗೂಡಿ ಹಳ್ಳವಾಯಿತು. ಹಣವಲ್ಲ, ಪುಸ್ತಕ!

## ಮೇಲೆದ್ದಿತು, ಪುಸ್ತಕ ಮನೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನಿರ್ವಾಹಕರಾಗಿ ಅಲ್ಪ ಕಾಲ ದುಡಿತ. ಮುಂದೆ ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಅಧಿಕಾರಿಯಾದರು. ಉದ್ಯೋಗದಿಂದ ಸ್ವ–ನಿವೃತ್ತಿ ಪಡೆದಾಗ ಪ್ರಾವಿಡೆಂಟ್ ಫಂಡಿನ ಹಣ ಕೈಗೆ ಬಂತು. ಅದೇ ಹೊತ್ತಿಗೆ ಹೊಲದಲ್ಲಿ ಕಬ್ಬು ಬೆಳೆದು ನಿಂತಿತ್ತು. ಕಬ್ಬನ್ನು ಮಾರಿದ ದುಡ್ಡು ಕೈ ಸೇರಿತು. ಜತೆಗೆ ಮೈಸೂರಿನ ಮತ್ತು ಊರಿನ ತಮ್ಮ ನಿವೇಶನವನ್ನು ಮಾರಿದ್ದರಿಂದ ಲಭ್ಯವಾದ ಹಣ. ಇವೆಲ್ಲವೂ ಸೇರಿದಾಗ ಆದ ದೊಡ್ಡ ಮೊತ್ತವನ್ನು ಗೌಡರು ಬ್ಯಾಂಕಿನಲ್ಲಿ ಠೇವಣಿ ಇಡಲಿಲ್ಲ! ಪುಸ್ತಕಕ್ಕೆ, ಅದನ್ನು ಕಾಪಾಡಲು ಬೇಕಾದ ವ್ಯವಸ್ಥೆಗೆ ವ್ಯಯಿಸಿದರು!

ಗೌಡರ ಈ ಮನಸ್ಥಿತಿಗೆ ನಕ್ಕವರು, ಗೇಲಿಮಾಡಿದವರ ಸಂಖ್ಯೆ ಸಣ್ಣದಲ್ಲ. ಅವಮಾನದ ನೋವುಗಳಿಗೆ ಧೃತಿಗೆಡಲಿಲ್ಲ. ‘ಪುಸ್ತಕದ ಹುಚ್ಚು ಒಮ್ಮೆ ಮೈಮೇಲೆ ಬಂದುಬಿಟ್ಟರೆ ಮತ್ತೆ ಅದೊಂದು ನನಗೆ ತಪಸ್ಸಾಯಿತು. ಪುಸ್ತಕಗಳು ಹೆಚ್ಚಾದಂತೆ ವ್ಯವಸ್ಥಿತವಾಗಿ ಪೇರಿಸುವುದೂ ಸಮಸ್ಯೆಯಾಯಿತು.